## ಪದಬಂಧ

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | 5 | | | ■ | ■ | |
| 6 | | 7 | ■ | ■ | ■ | 8 | | |
| | ■ | 9 | | 10 | | | ■ | |
| ■ | 11 | | ■ | | ■ | 12 | | ■ |
| 13 | ■ | 14 | | | | | ■ | 15 |
| 16 | | | ■ | ■ | ■ | 17 | | |
| | ■ | ■ | 18 | | 19 | ■ | ■ | |
| 20 | | | | ■ | 21 | | | |

**ಎಡದಿಂದ ಬಲಕ್ಕೆ**

1 ಕರ್ಕೋಟಕ ವಿಷ ತಂದ ನಳ್ಳಿ ದ್ವಾದಶ ರಾಶಿಗೆ ಸೇರಿತು 4
3 ಅಧಿಕ ಸಂತೋಷದ ನಡುವಿನ ದೊಡ್ಡ ಸಮಾರಂಭ 4
5 ವಣಿಕ ಹಾಡಿದ ಒಂದು ಪ್ರಕಾರದ ಜನಪದ ಹಾಡು 3
6 ಗಡುವಿಲ್ಲದೆ ಗಗನದಲ್ಲಿ ಹಾರಾಡಿದ ವಿಷ್ಣುವಾಹನ ಪಕ್ಷಿ 3
8 ನಾಗಾವಿ ಬಳಿಯ ಗ್ರಾಮಸ್ಥ ಈ ಗ್ರಾಮಾಧಿಕಾರಿ 3
9 ಜೇನಿನಷ್ಟೇ ಸಿಹಿಯಾಗಿ ಹರಿದು ಬಂದ ಗಾಯನ 5
11 ಶ್ರೇಷ್ಠವಾದುದೆಂದು ಭಾವಿಸಲಾದ ಪುರಾಣೋಕ್ತ ಪರ್ವತ 2
12 ಸಮಯ ಕಾದು ಹೊಂಚು ಹಾಕಿ ಹೂಡಿದ ಉಪಾಯ 2
14 ಸಂಗೀತ ನಿಯಮಿತವಾಗಿ ಅಲೆಯೋಪಾದಿ ಹರಿದಿದೆ 5
16 ಹಿಂದೂಸ್ತಾನಿ ಸಂಗೀತದ ಸಾಥಿ ವಾದ್ಯ 3
17 ಮಂಡಿಯೂರಿ ನೃತ್ಯದಲ್ಲಿ ನಿರತವಾದ ನವಿಲು 3
18 ಪುನುಗು ಪೂಸಿಕೊಂಡ ಶ್ರೇಷ್ಠ ಪುರುಷ 3
20 ನಗರದ ಗಣ್ಯರ ಬಳಿ ಇರಬಹುದಾದ ಆಭರಣ ಹಣ 4
21 ಅನ್ವೇಷಣೆ ಮಾಡುವ ವಿಜ್ಞಾನಿ ಲೋಕ ಪುರಸ್ಕೃತ 4

**ಮೇಲಿನಿಂದ ಕೆಳಕ್ಕೆ**

1 ಗಲಿಬಿಲಿಗೊಳ್ಳದೆ ಬಂದ ಕನ್ನಡದ ವೀರ 4
2 ಲಾಕರಿನಿಂದ ಹೊರ ಬಂದ ಮಂಜುಳ ಧ್ವನಿ 2
3 ಮಹಾರಾಣಿ ಧರಿಸಿದ ಅನರ್ಘ್ಯ ಹವಳ 2
4 ಕಾಲಕ್ಕೆ ಒತ್ತು ಕೊಟ್ಟು ನ್ಯಾಯಸ್ಥಾನದಲ್ಲಿ ಮಾಡಿದ ವಾದ 4
7 ಶಿವ ಕೈಲಿ ಹಿಡಿದ ವಾದ್ಯದಿಂದ ಹೊಮ್ಮಿದ ಶಬ್ದ 5
8 ಹಲವು ವಾದ್ಯಗಳ ಸಂಗೀತ ಒಟ್ಟಾಗಿ ಮೇಳೈಸಿದೆ 5
10 ಜತನವಾಗಿರಿಸಿಕೊಂಡು ಕಾಪಾಡಿದ ಬೆಳ್ಳಿ 3
13 ನೂತನ ದಿವಸ ಯುಗಾದಿಯಂದು ಬಂದಿತು 4
15 ಮಧುಮೇಹಿಗಳಿಗೆ ಸೂಕ್ತವಾದ ಸಮೃದ್ಧ ಕಾಳು 4
18 ಪುರಾಣ ಕೇಳಿದ ಸುಕೃತ 2
19 ನಗವಿಟ್ಟು ಸಂರಕ್ಷಿಸಬಹುದಾದ ಗುಹೆ 2

### 02—04—2026 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಮಬಲ 4. ಕುಡಿನೋಟ 6. ಸಿಸಿರ 7. ಅಗಲಿಕೆ 9. ವಿಭಾಕರ 13. ಉಸಿರು 16. ನವರಸ 19. ತರಕಾರಿ 21. ಮಾನವ 22. ಶತಮಾನ 23. ಕರಗತ

**ಮೇಲಿನಿಂದ ಕೆಳಕ್ಕೆ**

2. ಮತಂಗ 3. ಲಸಿಕೆ 4. ಕುರವಿ 5. ನೋಟಕ 7. ಅನಿಕೇತನ 8. ಲಿಪಿ 10. ಭಾಸ 11. ರಜತಗಿರಿ 12. ಹಾಸಿಗೆ 14. ಮಾರ 15. ಪರ 17. ವಸಂತ 18. ಸಮಾನ 19. ತವಕ 20. ಕಾಳಿಂಗ

■ ಅ.ನಾ. ಪ್ರಹ್ಲಾದರಾವ್

**ಮಹಿಳಾ ವಿಜ್ಞಾನಿ**

# ಪಾಶ್ಚಾತ್ಯ ಪದ್ಧತಿಯಲ್ಲಿ ಪದವಿ ಪಡೆದ ವೈದ್ಯೆ

**ಡಾ. ಆನಂದಿಬಾಯಿ ಗೋಪಾಲರಾವ್ ಜೋಷಿ** (1865–1887) ಅವರು ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯಲ್ಲಿ (Western Medicine) ಪದವಿ ಪಡೆದ ಭಾರತದ ಮೊಟ್ಟಮೊದಲ ಮಹಿಳಾ ವೈದ್ಯರು. ಮಹಿಳೆಯರು ಶಿಕ್ಷಣ ಪಡೆಯುವುದೇ ಅಪರಾಧ ಎಂದು ಭಾವಿಸಲಾಗುತ್ತಿದ್ದ ಕಾಲದಲ್ಲಿ, ಸಪ್ತಸಾಗರ ದಾಟಿ ಅಮೆರಿಕಕ್ಕೆ ಹೋಗಿ ವೈದ್ಯಕೀಯ ಶಿಕ್ಷಣ ಮುಗಿಸಿದ ಧೀಮಂತ ಮಹಿಳೆ ಇವರು. ಅವರ ಆ ನಿರ್ಧಾರದ ಹಿಂದೆ ಬಲವಾದ ಕಾರಣವಿತ್ತು!

ಆನಂದಿಬಾಯಿ ಅವರು ಕೇವಲ 9ನೇ ವಯಸ್ಸಿನಲ್ಲಿ ಮದುವೆಯಾದರು. 14ನೇ ವಯಸ್ಸಿನಲ್ಲಿ ಅವರು ಒಂದು ಗಂಡು ಮಗುವಿಗೆ ಜನ್ಮ ನೀಡಿದರು. ಆದರೆ ಸರಿಯಾದ ವೈದ್ಯಕೀಯ ಸೌಲಭ್ಯವಿಲ್ಲದ ಕಾರಣ ಆ ಮಗು ಕೇವಲ 10 ದಿನಗಳಲ್ಲಿ ಸಾವನ್ನಪ್ಪಿತು. ಈ ಘಟನೆಯು ಅವರ ಜೀವನದ ದಿಕ್ಕನ್ನೇ ಬದಲಿಸಿತು. 'ನನ್ನಂತೆ ಯಾವ ತಾಯಿಯೂ ಮಗುವನ್ನು ಕಳೆದುಕೊಳ್ಳಬಾರದು, ಭಾರತೀಯ ಮಹಿಳೆಯರಿಗಾಗಿ ಮಹಿಳಾ ವೈದ್ಯರು ಇರಲೇಬೇಕು' ಎಂಬ ಸಂಕಲ್ಪ ಮಾಡಿ ವೈದ್ಯಕೀಯ ಶಿಕ್ಷಣ ಪಡೆಯಲು ನಿರ್ಧರಿಸಿದರು.

ಪತಿ ಗೋಪಾಲರಾವ್ ಜೋಷಿ ಅವರು ಆನಂದಿಬಾಯಿ ಅವರ ಶಿಕ್ಷಣಕ್ಕೆ ಭದ್ರಬುನಾದಿ ಹಾಕಿಕೊಟ್ಟರು. ಅಂದಿನ ಸಮಾಜದ ತೀವ್ರ ವಿರೋಧದ ನಡುವೆಯೂ ಪತ್ನಿಯ ಇಚ್ಛೆಯಂತೆ ಅವರನ್ನು ಅಮೆರಿಕಕ್ಕೆ ಕಳುಹಿಸಿಕೊಟ್ಟರು.

ಆನಂದಿಬಾಯಿ 1883ರಲ್ಲಿ ಒಬ್ಬಂಟಿಯಾಗಿ ಅಮೆರಿಕಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿನ ಪೆನ್ಸಿಲ್ವೇನಿಯಾ ಮಹಿಳಾ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದು, ಶ್ರದ್ಧೆಯಿಂದ ಕಲಿತು 1886ರಲ್ಲಿ ಎಂ.ಡಿ. (M.D.) ಪದವಿಯನ್ನು ಪೂರ್ಣಗೊಳಿಸಿದರು. ಅವರ ಸಾಧನೆಯನ್ನು ಮೆಚ್ಚಿ ಅಂದಿನ ಬ್ರಿಟಿಷ್ ರಾಣಿ ವಿಕ್ಟೋರಿಯಾ ಅವರು ಅಭಿನಂದನಾ ಪತ್ರ ಕಳುಹಿಸಿದ್ದರು.

ವಿದ್ಯಾಭ್ಯಾಸ ಮುಗಿದ ನಂತರ ನೇರ ಭಾರತಕ್ಕೆ ಮರಳಿದ ಅವರನ್ನು ಕೊಲ್ಹಾಪುರದ ಅಲ್ಬರ್ಟ್ ಎಡ್ವರ್ಡ್ ಆಸ್ಪತ್ರೆಯ ಮಹಿಳಾ ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಅವರ ಅಲ್ಪಾಯುಷ್ಯ ಹೆಚ್ಚಿನ ಸಾಧನೆಗೆ ಅನುವು ಮಾಡಿಕೊಡಲಿಲ್ಲ. ಅಮೆರಿಕದ ಚಳಿ ಮತ್ತು ಕಠಿಣ ಪರಿಶ್ರಮದಿಂದಾಗಿ ಆನಂದಿಬಾಯಿ ಅವರು ಕ್ಷಯರೋಗಕ್ಕೆ (Tuberculosis) ತುತ್ತಾಗಿದ್ದರು. ಭಾರತಕ್ಕೆ ಮರಳಿದ ಕೆಲವೇ ತಿಂಗಳಲ್ಲಿ, ಅಂದರೆ ಕೇವಲ 21ನೇ ವಯಸ್ಸಿನಲ್ಲಿ ಅವರು ನಿಧನರಾದರು.



ಅವರು ವೈದ್ಯೆಯಾಗಿ ದೀರ್ಘಕಾಲ ಸೇವೆ ಸಲ್ಲಿಸಲು ಸಾಧ್ಯವಾಗದಿದ್ದರೂ, ಭಾರತೀಯ ಮಹಿಳೆಯರಿಗೆ ವೈದ್ಯಕೀಯ ಕ್ಷೇತ್ರದ ಬಾಗಿಲನ್ನು ತೆರೆದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಕೊಡುಗೆಯ ಗೌರವಾರ್ಥವಾಗಿ ಶುಕ್ರ ಗ್ರಹದ ಮೇಲಿರುವ ಒಂದು ಕುಳಿಗೆ (Crater) ಜೋಷಿ ಎಂದು ಹೆಸರಿಡಲಾಗಿದೆ. ಇಂದಿಗೂ ಅನೇಕ ವೈದ್ಯಕೀಯ ವಿದ್ಯಾರ್ಥಿನಿಯರಿಗೆ ಇವರ ಜೀವನವೇ ದೊಡ್ಡ ಪಠ್ಯಪುಸ್ತಕವಾಗಿದೆ.

■ ಗುರುರಾಜ್ ಎಸ್.
ದಾವಣಗೆರೆ